ಹಾಕಿ ಅವನು ಮನೆಗೆ ಹೋಗಬಹುದು.

ಸೀಟನ್ನು ಹಿಂದಕ್ಕೆ ತಳ್ಳಿ ಒರಗಿಸಿ ಡ್ರೈವರ್ ನಿದ್ರಿಸತೊಡಗಿದ. ಅದೊಂದು ಜೈವಯಂತ್ರವಾಯಿತು. ಕಣ್ಣುಚ್ಚಿದ ಕೂಡಲೇ ಡ್ರೈವರ್ ಗೊರಕೆ ಹೊಡೆಯತೊಡಗಿದ. ಮಂದಗತಿಯಲ್ಲಿ ಪ್ರಾರಂಭವಾದ ಗೊರಕೆ ನಿಧಾನವಾಗಿ ತಾರಕಕ್ಕೇರಿತು. ಗೇರುಗಳು ಬದಲಾಯಿಸಿ ಬದಲಾಯಿಸಿ ಕೊನೆಗೊಂದು ಶುದ್ಧತಾಳದಲ್ಲಿ ಸಾಗಿತು. ಆದರೆ ನನಗೆ ನಿದ್ರೆ ಬರಲಿಲ್ಲ.

ಶ್ರೀದೇವಿಯ ಪ್ರತೀಕಾರದಿಂದ ಉಳಿದುಕೊಂಡ ಸಮಾಧಾನ ಈಗ ನನ್ನ ಮನಸ್ಸಿನಲ್ಲಿಲ್ಲ. ಈಗ ನನ್ನ ಮನಸ್ಸು ಸುಮಿತ್ರಳ ಅವ್ಯಕ್ತವಾದ ಚಿತ್ರದ ಸುತ್ತಲೂ ಅಲೆಯುತ್ತಿದೆ. ಸುಮಿತ್ರ ಪಾಪ ನನ್ನನ್ನು ಕಾಯುತ್ತಾ ಮದುವೆಯಾಗದೆ ದಿನದೂಡುತ್ತಿದ್ದಾಳೆ. ಕಂಡಕಂಡ ಅಪರಿಚಿತನಲ್ಲಿ ನನ್ನ ಮುಖವನ್ನು ಅರಸುತ್ತಾ ಮನೆಯ ಅಂಗಳದಲ್ಲಿ ಕುಳಿತು ಕಾಲ ಕಳೆಯುತ್ತಿದ್ದಾಳೆ. ಪ್ರತಿಯೊಂದು ವಾಹನದ ಮೊರೆತದಲ್ಲೂ ನನಗೋಸ್ಕರ ಅವಳ ಹೃದಯ ತುಡಿಯುತ್ತಿದೆ. ವಯಸ್ಸಾದ ಮಾವ ಒರಗು ಕುರ್ಚಿಯಲ್ಲಿ ಕುಳಿತು ಅವಳ ಚಲನವಲನಗಳನ್ನು ಗಮನಿಸುತ್ತಾ ಸಂಕಟಪಡುತ್ತಿದ್ದಾರೆ. ನನ್ನ ಟ್ಯಾಕ್ಸಿ ನಿಲ್ಲಿಸಿದ ಕೂಡಲೇ ಇಬ್ಬರು. ನನ್ನನ್ನು ನಿರೀಕ್ಷಿಸಿದಂತೆ ಎದ್ದು ನಿಂತು ಮುಗುಳ್ನಗು ಚೆಲ್ಲುತ್ತಿದ್ದಾರೆ...ಅಲ್ಲ... ಅಲ್ಲ ಸುಮಿತ್ರ ಓಡೋಡಿ ನನ್ನತ್ತ ಬರುತ್ತಿದ್ದಾಳೆ.

ಶ್ರೀದೇವಿಯ ಪ್ರತೀಕಾರದಿಂದ ಉಳಿದುಕೊಂಡ ಸಮಾಧಾನ ಈಗ ನನ್ನ ಮನಸ್ಸಿನಲ್ಲಿಲ್ಲ. ಈಗ ನನ್ನ ಮನಸ್ಸು ಸುಮಿತ್ರಳ ಅವ್ಯಕ್ತವಾದ ಚಿತ್ರದ ಸುತ್ತಲೂ ಅಲೆಯುತ್ತಿದೆ. ಸುಮಿತ್ರ ಪಾಪ ನನ್ನನ್ನು ಕಾಯುತ್ತಾ ಮದುವೆಯಾಗದೆ ದಿನದೂಡುತ್ತಿದ್ದಾಳೆ. ಕಂಡಕಂಡ ಅಪರಿಚತನಲ್ಲಿ ನನ್ನ ಮುಖವನ್ನು ಅರಸುತ್ತಾ ಮನೆಯ ಅಂಗಳದಲ್ಲಿ ಕುಳಿತು ಕಾಲ ಕಳೆಯುತ್ತಿದ್ದಾಳೆ. ಪ್ರತಿಯೊಂದು ವಾಹನದ ಮೊರೆತದಲ್ಲೂ ನನಗೋಸ್ಕರ ಅವಳ ಹೃದಯ ತುಡಿಯುತ್ತಿದೆ. ವಯಸ್ಸಾದ ಮಾವ ಒರಗುಖುರ್ಚಿಯಲ್ಲಿ ಕುಳಿತು ಅವಳ ಚಲನವಲನಗಳನ್ನು ಗಮನಿಸುತ್ತಾ ಸಂಕಟಪಡುತ್ತಿದ್ದಾರೆ. ನನ್ನ ಟ್ಯಾಕ್ಸಿ ನಿಲ್ಲಿಸಿದ ಕೂಡಲೇ ಇಬ್ಬರು. ನನ್ನನ್ನು ನಿರೀಕ್ಷಿಸಿದಂತೆ ಎದ್ದು ನಿಂತು ಮುಗುಳ್ನಗು ಚೆಲ್ಲುತ್ತಿದ್ದಾರೆ...ಅಲ್ಲ...ಅಲ್ಲ ಸುಮಿತ್ರ ಓಡೋಡಿ ನನ್ನತ್ತ ಬರುತ್ತಿದ್ದಾಳೆ.

ಮನೆ ದುರಸ್ತಿ ಕಂಡಿದೆ. ಮನೆಯ ಹೊರಗಿನ ತಂತಿಯ ಮೇಲೆ ಕೊಳಕಾದ ಬನಿಯನ್ನಿನಂತೆ ಒಂದಷ್ಟು ರಬ್ಬರ್ ಹಾಳೆಗಳು ನೇತಾಡುತ್ತಿವೆ. ಹೂಬಿಟ್ಟ ಕಾಫಿ ಗಿಡದ ಸುಗಂಧದಲ್ಲಿ ರಬ್ಬರಿನ ಹಸಿವಾಸನೆ ಗೊತ್ತಾಗುತ್ತಲೇ ಇಲ್ಲ.

ನನಗೆ ನಿದ್ರೆ ಬಂತು. ನಿದ್ರೆಯಲ್ಲಿ ಮಾವನ ಮನೆಯ ಕನಸನ್ನು ಕಂಡೆ. ಆದರೆ ನನ್ನನ್ನು ಎದುರ್ಗೊಂಡಿದ್ದು ಅತ್ತೆ, ಮಾವ ಸುಮಿತ್ರ ಯಾರೂ ಅಲ್ಲ. ನನ್ನನ್ನು ಬರಮಾಡಿಕೊಂಡಿದ್ದು ಶ್ವೇತ ವಸ್ತ್ರಧಾರಿಯಾದ ರತಿ! ಅವಳ ಎರಡೂ ಬದಿಗಳಲ್ಲಿ ಇಬ್ಬರು ಹೆಣ್ಮಕ್ಕಳು ಬೆಂಗಾವಲಾಗಿ ನಿಂತಿದ್ದರು. ಗೋಡೆಯ ಮೇಲೆ ಒಬ್ಬ ಯೋಧನ ಭಾವಚಿತ್ರಕ್ಕೆ ಹೂವಿನ ಹಾರ ಹಾಕಲಾಗಿತ್ತು. ಅಳುತ್ತಿದ್ದ ಕಿರಿಯ ಹೆಣ್ಣು ಮಗುವನ್ನು ಅವಳು ಕಂಕುಳಿಗೇರಿಸಿ ಕೇಳಿದಳು,

'ಕೊನೆಗೆ ಏನಾಯಿತು? ಕಾಯಲು ನಾನು ಮಾತ್ರ ಉಳಿದುಕೊಂಡೆ. ಇವೆರಡನ್ನು ಸೇರಿಸಿ ಒಟ್ಟಿಗೆ ಬದುಕೋಣ, ಅಲ್ವಾ?'

ನಿದ್ರೆ ಮುರಿದಿದ್ದು ರತಿಯ ಪ್ರಶ್ನೆಯಿಂದಲ್ಲ, ಡ್ರೈವರನ ಕರೆ ಕೇಳಿ.

'ಸರ್ ನಿಮ್ಮ ಊರು ತಲುಪಿದ್ದೇವೆ. ಮುಂದಿನ ತಾರಿ ತೋರಿಸಿ'

'ಡ್ರೈವರ್, ನೀನು ಯಾವಾಗ ಎಚ್ಚರಗೊಂಡೆ? ಯಾವಾಗ ಗಾಡಿಸ್ಟಾರ್ಟ್ ಮಾಡಿದೆ?'

'ಸರ್, ನನ್ನ ನಿದ್ರೆ ಕರೆಕ್ಟಾಗಿ ಎರಡು ಗಂಟೆಗಳ ಕಾಲ ಮಾತ್ರ. ಎರಡು ಗಂಟೆ ಆದ ಕೂಡಲೆ ನನ್ನೊಳಗಿನ ಅಲರಾಂ ಸದ್ದು ಮಾಡುತ್ತದೆ. ಹಾಗೆ ಇವತ್ತೂ ಎದ್ದೆ. ಎದ್ದವನೇ ತಟ್ಟುಕಡದಿಂದ ಒಂದು ಕಟ್ಟಂಚಾಯ ಕುಡಿದು ಗಾಡಿ ಸ್ಟಾರ್ಟ್ ಮಾಡಿದೆ. ಎರಡು ಗಂಟೆಗಳ ನಿದ್ರೆ ಮತ್ತು ಒಂದು ಕಟ್ಟನ್ ಚಾಯ ಇದ್ದುಬಿಟ್ಟರೆ ಮತ್ತೆ ಎಂಟತ್ತು ಗಂಟೆಗಳ ಕಾಲ ನನಗೆ ಯಾವುದೇ ಯೋಚನೆಯಿಲ್ಲ ಸರ್.'

ಬೆಳಕು ಹರಿದಿತ್ತು. ಜಂಕ್ಷನ್‌ನಲ್ಲಿ ಊರಿಗಿರುವ ರಸ್ತೆಯಲ್ಲೇ ಕಾರು ನಿಲ್ಲಿಸಿದ್ದಾನೆಂದು ತಿಳಿಯಿತು. ನೆನಪು ಮಾಸಿತ್ತು. ಕಂಡ ಹೊಸ ಕಟ್ಟಡಗಳನ್ನೆಲ್ಲಾ ಕೆಡವಿ ಬಹಳ ವರ್ಷಗಳ ಹಿಂದಿನ ಜಂಕ್ಷನ್‌ನ್ನು ಪುನಃ ಸೃಷ್ಟಿಸಿದೆ. ಮೂರು ಮಹಡಿಗಳಿರುವ ನಾಲ್ಕು ಶಾಪಿಂಗ್ ಕಾಂಪ್ಲೆಕ್ಸ್‌ಗಳನ್ನು ಹೊಡೆದು ಬೀಳಿಸಿದಾಗ ತೆಂಗಿನ ಗರಿ ಹಾಸಿದ ಕೊರುಂಬಿಯ ಕಾಫಿಯಂಗಡಿ, ಅಸ್ಸನಾರಿನ ಚಿಲ್ಲರೆ ಅಂಗಡಿ, ಕಿಟ್ಟನ್ ಮಾಸ್ತರರ ಸ್ಟೇಷನರಿ ಅಂಗಡಿ ಮುಂತಾದವುಗಳು ನಿಚ್ಚಳವಾಗಿ ಕಾಣಿಸಿಕೊಂಡವು. ಟಾರು ಬಳಿದ ಅಗಲವಾದ ರಸ್ತೆಯನ್ನು ಕೆಮ್ಮಣ್ಣಿನ ದಾರಿಯನ್ನಾಗಿ ಬದಲಾಯಿಸಿದಾಗ ಹಾದಿ ಸ್ಪಷ್ಟವಾಗಿ ಕಾಣಿಸಿತು. ನೇರವಾಗಿ ಹೋಗುವಂತೆ ಡ್ರೈವರ್‌ಗೆ ಹೇಳಿದೆ.

ರಸ್ತೆಗೆ ಅಡ್ಡ ಬರುವವರು ಯಾರೂ ಇರಲಿಲ್ಲ. ಪೊಲೀಸ್ ವ್ಯಾನ್, ಆಂಬುಲೆನ್ಸ್ ಯಾವುದೂ ಕಾಣಿಸಲಿಲ್ಲ. ಹಳೆಯ ಯು.ಪಿ. ಸ್ಕೂಲಿನ ಮುಂದೆ ಬಂದು ತಲುಪಿದಾಗ ಡ್ರೈವರ್‌ಗೆ ಕಾರು ನಿಲ್ಲಿಸುವಂತೆ ಹೇಳಿದೆ. ಶಾಲೆ ಹಾಗೆಯೇ ಇತ್ತು. ಆದರೆ ಒಂಟಿ ಕೋಣೆಯ ವಾಚನಾಲಯದ ಭಾಗದಲ್ಲಿ ಎರಡು ಮಹಡಿ ಬೃಹತ್ ಸಿಮೆಂಟ್ ಕಟ್ಟಡ ತಲೆಯೆತ್ತಿ ನಿಂತಿತ್ತು. ವಾಚನಾಲಯದ ಎದುರಿನಿಂದ ಒಂದು ಟಾರ್ ರಸ್ತೆಯಿದೆ. ತೋಡಿನ ಮೇಲೆ ಕಾಂಕ್ರಿಟ್ ಸೇತುವೆಯನ್ನು ನಿರ್ಮಿಸಲಾಗಿತ್ತು.

ಸೇತುವೆ ಮತ್ತು ರಸ್ತೆ ಬಂದಿದ್ದರಿಂದ ಮಾವನ ಮನೆಯ ಮುಂದೆಯೇ ಟ್ಯಾಕ್ಸಿ ನಿಂತುಕೊಂಡಿತು. ಟ್ಯಾಕ್ಸಿಯವನು ಹೇಳಿದ ಚಾರ್ಜು ಕೊಂಚ ಜಾಸ್ತಿಯೆನಿಸಿದರೂ ರಿಸ್ಕ್ ಅಲೊವೆನ್ಸ್ ಆಗಿ ಅಷ್ಟೊಂದು ಹೇಳಿದ್ದಾನೆಂದುಕೊಂಡೆ. ಸಮಾಧಾನಕ್ಕಾಗಿ ಅವನು ಹೇಳಿದಷ್ಟನ್ನೇ ಕೊಟ್ಟೆ. ಲಾಂಗು, ಮಚ್ಚು ಬೀಸುವ ರಾತ್ರೆಗಳು ಮಾತ್ರವಿರುವ ಊರಿನಿಂದ ನಾನು ತಪ್ಪಿಸಿಕೊಂಡು ಬಂದಿದ್ದೆ. ಈಗ ಅದೇ ನಸುಕಿನ ಹನಿಯುವ ಮಂಜಿನ ತೆಳು ಪದರು, ಹಾಲೆ ಹೂವಿನ ಸುಗಂಧ ಸೂಸುವ ಊರಿಗೆ ಮರಳಿ ಬಂದಿದ್ದೇನೆ. ಈ ನೆಮ್ಮದಿಯ ತಾಣಕ್ಕೆ ತಲುಪಿಸಿದ್ದು ಇವನಲ್ಲವೆ? ಪೆಟ್ಟಿಗೆಯನ್ನು ಕೆಳಗಿಳಿಸಿ ಟ್ಯಾಕ್ಸಿ ಮರುಳುವಷ್ಟರಲ್ಲಿ ಮನೆಯ ಬಾಗಿಲು ತೆರೆಯಲ್ಪಟ್ಟಿತು.

ಯಾರಿರಬಹುದು?

ಓ....ಅತ್ತೆ. ಅತ್ತೆ ನನ್ನನ್ನು ಗುರುತಿಸಿದ್ದಾರೆ. ನಾನಲ್ಲದೆ ಇನ್ಯಾರು ಇಲ್ಲಿ ಈ ರೂಪದಲ್ಲಿ ಅವತರಿಸುವುದು?

ತೊಡರು ಹೆಜ್ಜೆ ಇಡುತ್ತಾ ಆತುರಾತುರವಾಗಿ ಹೊರಕ್ಕಿಳಿದು ಬಂದ ಅತ್ತೆ ನನ್ನ ಕೈಗಳನ್ನು ಹಿಡಿದು ಗಟ್ಟಿಯಾಗಿ ಅದುಮಿದರು. ನರಗಳು ಎದ್ದು ಕಾಣುವ ಅವರ ಕೈಬೆರಳುಗಳಲ್ಲಿ ಮುಪ್ಪಿನ ಲಕ್ಷಣ ಸ್ಪರ್ಶ ಮಾತ್ರದಿಂದ ತಿಳಿಯಿತು. ನನ್ನನ್ನು ತಬ್ಬಿಹಿಡಿದು ಬೆನ್ನನ್ನು ನೇವರಿಸಿದರು. ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಹರಿಯತೊಡಗಿತು. ಮಾವ ಜೀವಂತವಾಗಿ ಇಲ್ಲವೆಂಬುದು ಆಗಷ್ಟೇ ನನಗೆ ತಿಳಿಯಿತು.

ನಾನೇ ಪೆಟ್ಟಿಗೆಯನ್ನು ಎತ್ತಿ ವರಾಂಡದಲ್ಲಿಟ್ಟೆ. ಮಾವನ ಬಟ್ಟೆಯ ಒರಗು ಕುರ್ಚಿ ಅಲ್ಲಿರಲಿಲ್ಲ. ಪ್ಲಾಸ್ಟಿಕ್ ನಾರಿನಿಂದ ಅಲ್ಲಲ್ಲಿ ಎಳೆದು ಕಟ್ಟಿರುವ ಎರಡು ಬೆತ್ತದ ಕುರ್ಚಿಗಳು ಈಗಲೂ ಇವೆ. ನಿಟ್ಟುಸಿರು ಬಿಡುತ್ತಾ ನಾನೊಂದು ಖುರ್ಚಿಯಲ್ಲಿ ಕುಳಿತುಕೊಂಡೆ. ನಾನು ಮೊದಲು ಬಂದಿದ್ದಾಗ ನನ್ನನ್ನು ನೋಡುತ್ತಾ ನಿಂತಿದ್ದ ಅತ್ತೆ ಮತ್ತದೇ ಕಂಬಕ್ಕೊರಗಿ ನನ್ನನ್ನು ದಿಟ್ಟಿಸಿದರು. ಮಳೆ ನಿಂತ ಮೇಲೆ ಎಳೆಬಿಸಿಲಿನ ಮುಗುಳ್ನಗು ಹರಡುವಂತೆ ಒಂದು ನಗು ಕಾಣಿಸಿಕೊಂಡಿತು. ಅತ್ತೆಯ ಹಲ್ಲುಗಳು ಯಾವುದೂ ಬಿದ್ದಿಲ್ಲ. ಮಾವ ಯಾವಾಗ ತೀರಿಕೊಂಡರೆಂದು ಕೇಳಬೇಕೆನಿಸಲಿಲ್ಲ. ಆದರೆ ನನ್ನ ಕಣ್ಣುಗಳು ಮಾವ ಹಿಂದೆ ಕೂರುತ್ತಿದ್ದ ಕಡೆಗೆ ಸರಿಯುತ್ತಿರುವುದನ್ನು ಕಂಡು, ಅತ್ತೆಯ ಕಣ್ಣುಗಳಲ್ಲಿ ಮತ್ತೆ ಕಣ್ಣೀರ ಸಾಲುಗಳು ಟಿಸಿಲೊಡೆದವು.

'ಅವರು ಹೋಗಿ ಮೂರು ವರ್ಷಗಳಾದವು ಮಗನೆ' ಅತ್ತೆ ಅಳುವುದರ ನಡುವೆ ಮೌನ ಮುರಿದರು. 86ನೆಯ ವಯಸ್ಸಿನಲ್ಲಿ ನಾಲ್ಕುಕಾಲಿನ ಪ್ರಾಣಿಯಿಂದ ಆಪಘಾತ ಉಂಟಾಗುತ್ತದೆಂದು ಜ್ಯೋತಿಷಿ ಎಚ್ಚರಿಸಿದ್ದರು. ಆದರೆ 79ಕ್ಕೆ ಮೊದಲೆ ಅವರು ಹೋದರು. ಈಗ ನಾನು ಒಂಟಿ, ಅನಾಥೆ...

ನಾನು ಬೆಚ್ಚಿದೆ. ಅತ್ತೆ ಇಲ್ಲಿ ಏಕಾಂಗಿಯೆ? ನಾಲ್ವರು ಮದುವೆಯಾಗಿ ನಾಲ್ಕು ಹಾದಿಯಲ್ಲಿ ಹೋಗಿರಬೇಕು. ಯಾರೂ ಇಲ್ಲದೆ, ಈ ಮನೆಯಲ್ಲಿ ಹೇಗೆ ಕಾಲದೂಡುತ್ತಿದ್ದಾರೆ? ಅತ್ತೆ ಪುನಃ ಹೇಳಿದರು,

'ನನ್ನ ಮಗಳ ವಿಷಯ ಜ್ಞಾಪಿಸಿಕೊಂಡರೆ...'

ಅವರ ಮುಂದಿನ ವಿಶದೀಕರಣವೆಂಬಂತೆ ಒಳಗಿನಿಂದ ಹೆಜ್ಜೆಯ ಸಪ್ಪಳ ಕೇಳಿಸಿದಂತಾಯಿತು. ಅವಳು ಅತ್ತೆಯ ಮಗಳೇ ಆಗಿರಬೇಕು! ಯಾರಾಗಿರಬಹುದು? ಪ್ರತಿಯೊಂದು ಮುಖವು ನನ್ನ ಮುಂದೆ ಮಿಂಚಿ ಮರೆಯಾದರೂ ಸುಮಿತ್ರಳ ಮುಖಕ್ಕಾಗಿ ನಾನು ಹಾತೊರೆಯುತ್ತಿದ್ದೆ. ಹೌದು, ಹಾಗೆ ಹೊರ ಬಂದವಳು ಸುಮಿತ್ರಳೇ.